ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಅಧ್ಯಕ್ಷರು, ಆಯ್ಕೆ ಪ್ರಾಧಿಕಾರ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ. ಮೈಸೂರು.

ದೂರವಾಣಿ ಸಂಖ್ಯೆ: 0821-2424079,2422110,2428383

ಫ್ಯಾಕ್ಸ್ ನಂ : 2429012 & 2428383 E-Mail deo.mysore@gmail.com

ಸಂಖ್ಯೆ : MYSDC-EST2/VA(15)/2/2017/E-1998 ದಿನಾಂಕ: 30/10/2018

## ಅಧಿಕೃತ ಜ್ಞಾಪನ

ವಿಷಯ: 2016-17 ನೇ ಸಾಲಿನಲ್ಲಿ ಮೈಸೂರು ಜಿಲ್ಲಾ ಕಂದಾಯ ಘಟಕದ ತಾಲ್ಲೂಕು ಕಛೇರಿಗಳಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು.

ಉಲ್ಲೇಖ:
1) ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 299 ಬಿಎಸ್‌ಸಿ 2006 ದಿನಾಂಕ: 03/02/2009 ಮತ್ತು 24/07/2009
2) ಸರ್ಕಾರದ ಪತ್ರ ಸಂಖ್ಯೆ ಕಂ.ಇ 04 ಬಿ.ಎಸ್.ಸಿ 2011 ದಿ: 25/02/2011
3) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 53 ಸೆನೆನಿ 2007 ದಿ: 04/01/2008
4) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 52 ಎಸ್.ಆರ್.ಆರ್ 99 ದಿನಾಂಕ: 29/11/2002
5) ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 100 ಡಿಪಿಎಆರ್ 2011 ದಿನಾಂಕ: 29/06/2012
6) ಸರ್ಕಾರದ ಅ.ಸ.ಪತ್ರ ಸಂಖ್ಯೆ 103 ಬಿಎಸ್‌ಸಿ 2016 ದಿನಾಂಕ: 22/07/2016
7) ಈ ಕಛೇರಿಯ ಅಧಿಸೂಚನೆ ಸಂಖ್ಯೆ ವಿಎ ಇ.ಎಸ್.ಟಿ 84/2016-17 ದಿನಾಂಕ: 06/12/2016
8) ಈ ಕಛೇರಿಯ ಅಂತಿಮ ಆಯ್ಕೆ ಪಟ್ಟಿ ಹಾಗೂ ಕಾಯ್ದಿರಿಸಿದ ಪಟ್ಟಿ ಅಧಿಕೃತ ಜ್ಞಾಪನ ಸಂಖ್ಯೆ ದಿನಾಂಕ: 27/01/2018

****

ಮೈಸೂರು ಜಿಲ್ಲಾ ಕಂದಾಯ ಘಟಕದ ತಾಲ್ಲೂಕು ಕಛೇರಿಗಳಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಉಲ್ಲೇಖ (1) ಮತ್ತು (2) ರಲ್ಲಿ ಸರ್ಕಾರವು ಅನುಮತಿ ನೀಡಲಾಗಿದೆ. ಮೈಸೂರು ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಉಲ್ಲೇಖ (7) ರಂತೆ ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಮೈಸೂರು ಜಿಲ್ಲಾ ಕಂದಾಯ ಘಟಕದ ತಾಲ್ಲೂಕು ಕಛೇರಿಗಳಲ್ಲಿ ಖಾಲಿಯಿರುವ 105 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಈ ಕಛೇರಿಯ ಉಲ್ಲೇಖ (7) ರ ಅಧಿಸೂಚನೆಯ ಮೂಲಕ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಅರ್ಹತೆ ಮತ್ತು ಮೀಸಲಾತಿಯನ್ವಯ ವಿಂಗಡಿಸಿ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗೆ ಅವಕಾಶ ಕಲ್ಪಿಸಲಾಗಿತ್ತು.

ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಆಕ್ಷೇಪಣೆಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಿ ಉಲ್ಲೇಖ (8) ರಂತೆ ಮೆರಿಟ್ ಹಾಗೂ ಮೀಸಲಾತಿಯನ್ವಯ, ಅಂತಿಮ ಆಯ್ಕೆಪಟ್ಟಿ ಮತ್ತು ಕಾಯ್ದಿರಿಸಿದ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಉಲ್ಲೇಖ 1 ರಿಂದ 6 ರವರೆಗಿನ ಸರ್ಕಾರದ ಆದೇಶಗಳಂತೆ ಹಾಗೂ ಕರ್ನಾಟಕ ಜನರಲ್ ಸರ್ವೀಸ್ (ರೆವೆನ್ಯೂ ಸಬಾರ್ಡಿನೇಟ್ ಬ್ರಾಂಚ್) ಕೇಡರ್ ಮತ್ತು ರಿಕ್ರೂಟ್‌ಮೆಂಟ್ ನಿಯಮಗಳು 1977 ರ ಮೇರೆಗೆ ಆಯ್ಕೆಯಾಗಿರುವ ಈ ಕೆಳಕಂಡ ಅಭ್ಯರ್ಥಿಗಳನ್ನು ಗ್ರಾಮಲೆಕ್ಕಿಗರ ಹುದ್ದೆಯ ವೇತನ ಶ್ರೇಣಿ ರೂ 21400 - 42000 ರಲ್ಲಿ ಗ್ರೂಪ್ 'ಸಿ' ವೃಂದದ ಗ್ರಾಮಲೆಕ್ಕಿಗರ ಹುದ್ದೆಗೆ ಈ ಕೆಳಕಂಡ ಷರತ್ತುಗೊಳಪಟ್ಟು ನೇಮಕಾತಿ ಮಾಡಿ ಅವರ ಹೆಸರಿನ ಮುಂದೆ ನಮೂದಿಸಲ್ಪಟ್ಟಿರುವ ಸ್ಥಳ / ಕಛೇರಿ /ವೃತ್ತಕ್ಕೆ ನೇಮಕಾತಿ ಮಾಡಿ ಆದೇಶಿಸಿದೆ.

| ಕ್ರ. ಸಂ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ ಶ್ರೀಯುತರು | ಮೀಸಲಾತಿ | ನೇಮಕಗೊಳಿಸಿದ ಹುದ್ದೆ ಮತ್ತು ಸ್ಥಳ | ಕರ್ತವ್ಯಕ್ಕೆ ಹಾಜರಾಗಬೇಕಾದ ಕಛೇರಿ ಮತ್ತು ಸ್ಥಳ |
|---|---|---|---|---|
| 1. | ಸಹನ ಎಸ್ ಬಿನ್ ಸುರೇಶ್ ಜೆ,<br>ಡೋರ್ ನಂ 1560/ಎ, 18ನೇ ಮುಖ್ಯ ರಸ್ತೆ ,<br>ಬೆಂಗಳೂರು ಸಿಟಿ 560026 | GM (W) | ಗ್ರಾಮಲೆಕ್ಕಿಗರು,<br>ಚಕ್ಕೋಡನಹಳ್ಳಿ ವೃತ್ತ,<br>ಕಸಬಾ ಹೋಬಳಿ<br>ಹೆಗ್ಗಡದೇವನಕೋಟೆ ತಾಲ್ಲೂಕು | ತಾಲ್ಲೂಕು ಕಛೇರಿ,<br>ಹೆಗ್ಗಡದೇವನಕೋಟೆ ತಾಲ್ಲೂಕು |
| 2. | ದೀಕ್ಷಾ ಜೆ ಬಿನ್ ಜಯರಾಮಯ್ಯ<br>ನಂ 112, 11 ನೇ ಕ್ರಾಸ್, 7 ನೇ ಮೇನ್, ಹಾವನೂರು ಎಕ್ಸ್ ಟೆನ್ಷನ್, ನಾಗಸಂದ್ರ ಅಂಚೆ, ಬೆಂಗಳೂರು ಸಿಟಿ 560073 | GM (W) | ಗ್ರಾಮಲೆಕ್ಕಿಗರು.<br>ಹೆಬ್ಬಲಗುಪ್ಪೆ ವೃತ್ತ.<br>ಕಸಬಾ ಹೋಬಳಿ,<br>ಹೆಗ್ಗಡದೇವನಕೋಟೆ ತಾಲ್ಲೂಕು | ತಾಲ್ಲೂಕು ಕಛೇರಿ,<br>ಹೆಗ್ಗಡದೇವನಕೋಟೆ ತಾಲ್ಲೂಕು |
| 3. | ಚೈತ್ರ ಎಂ ಬಿನ್ ಮರಡಿರಂಗಯ್ಯ<br>ಅಂಬೇಡ್ಕರ್ ನಗರ, ಚೆಲೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ 572117 | SC (R) | ಗ್ರಾಮಲೆಕ್ಕಿಗರು,<br>ಅಡಹಳ್ಳಿ ವೃತ್ತ.<br>ಸರಗೂರು ಹೋಬಳಿ,<br>ಹೆಗ್ಗಡದೇವನಕೋಟೆ ತಾಲ್ಲೂಕು | ತಾಲ್ಲೂಕು ಕಛೇರಿ,<br>ಹೆಗ್ಗಡದೇವನಕೋಟೆ ತಾಲ್ಲೂಕು |
| 4. | ಯೋಗಿತಾ ಡಿ.ಎಸ್ ಬಿನ್ ಸುಬ್ರಹ್ಮಣ್ಯ ಡಿ.ಎ<br>ಡೋರ್ ನಂ 2/46, ಚೌಡೇಶ್ವರಿ ದೇವಾಲಯ ಮಹದೇವಪೇಟೆ ಹತ್ತಿರ, ಮಡಿಕೇರಿ,<br>ಕೊಡಗು ಜಿಲ್ಲೆ 571201 | GM (PH) | ಗ್ರಾಮಲೆಕ್ಕಿಗರು,<br>ಜಿನ್ನಹಳ್ಳಿ ವೃತ್ತ.<br>ಹಂಪಾಪುರಹೋಬಳಿ,<br>ಹೆಗ್ಗಡದೇವನಕೋಟೆ ತಾಲ್ಲೂಕು | ತಾಲ್ಲೂಕು ಕಛೇರಿ,<br>ಹೆಗ್ಗಡದೇವನಕೋಟೆ ತಾಲ್ಲೂಕು |

ಷರತ್ತುಗಳು:

1) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ಖಾಯಂಪೂರ್ವ ಸೇವಾ ನಿಯಮಗಳು 1977 ರ ಮೇರೆ ಕೆಲಸಕ್ಕೆ ಸೇರಿದ ದಿನಾಂಕದಿಂದ ಎರಡು ವರ್ಷದವರೆಗೆ ಪರಿವೀಕ್ಷಣಾ (ಆನ್ ಪ್ರೊಬೆಷನರಿ) ಅವಧಿ ಎಂದು ಪರಿಗಣಿಸಲಾಗುವುದು. ಸದರಿ ಅವಧಿಯಲ್ಲಿ ಸೇವೆಗೆ ಅನರ್ಹರೆಂದು ಕಂಡು ಬಂದಲ್ಲಿ ಸೇವೆಯಿಂದ ಬಿಡುಗಡೆ ಮಾಡಲಾಗುವುದು.
2) ಸದರಿ ಅವಧಿಯಲ್ಲಿ ನಿಗಧಿಪಡಿಸಿದ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಲೋಯರ್, ರೆವೆನ್ಯೂ ಲೋಯರ್ ಹಾಗೂ ಕನ್ನಡ ಭಾಷಾ ಪರೀಕ್ಷೆಗಳನ್ನು ಪಾಸು ಮಾಡುವುದು ಕಡ್ಡಾಯವಾಗಿರುತ್ತದೆ.
3) ನೇಮಕಾತಿ ಆದೇಶ ಪಡೆದ ದಿನಾಂಕದಿಂದ ಹದಿನೈದು ದಿನದೊಳಗಾಗಿ ಅಭ್ಯರ್ಥಿಯು ಕರ್ತವ್ಯದ ಮೇಲೆ ಸಂಬಂಧಪಟ್ಟ ಕಛೇರಿಯಲ್ಲಿ ಹಾಜರಾಗಬೇಕು. ಇಲ್ಲದಿದ್ದಲ್ಲಿ ಯಾವುದೇ ಸೂಚನೆ ನೀಡದೇ ನೇಮಕಾತಿಯನ್ನು ರದ್ದುಗೊಳಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
4) ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 17 ಎಸ್‌ಆರ್‌ಆರ್ 80 ದಿನಾಂಕ 09-10-1980 ರ ಮೇರೆ ಅವರ ಸೇವೆಯನ್ನು ನೇರ ನೇಮಕಾತಿಯ ಅಭ್ಯರ್ಥಿಯೆಂದು ಪರಿಗಣಿಸಲಾಗಿದೆ.
5) ಇವರ ನೇಮಕಾತಿ ಮತ್ತು ಸೇವಾ ಷರತ್ತುಗಳು ಆಗಿಂದಾಗ್ಗೆ ಜಾರಿಯಲ್ಲಿರುವ ಸರ್ಕಾರದ ನಿಯಮ / ಆದೇಶಗಳ ಅಧೀನಕ್ಕೆ ಒಳಪಟ್ಟಿರುತ್ತದೆ.
6) ನೇಮಕಾತಿ ಹೊಂದಿದ ಅಭ್ಯರ್ಥಿಯನ್ನು ಸರ್ಕಾರದ ಸುತ್ತೋಲೆ ಸಿಆಸುಇ 76 ಸೆಸೆನಿ 2018 ದಿನಾಂಕ: 15/02/2018 ರ ಪ್ರಕಾರ ಮೈಸೂರು ಜಿಲ್ಲಾ ಕಂದಾಯ ಘಟಕದ ಗ್ರಾಮಲೆಕ್ಕಿಗರ ಜೇಷ್ಠತಾ ಪಟ್ಟಿಯಲ್ಲಿ ಸೇವಾ ಜೇಷ್ಠತೆಯನ್ನು ಮೆರಿಟ್ ಆಧಾರದ ಮೇಲೆ ಪರಿಗಣಿಸಲಾಗುವುದು.

7) ಅಭ್ಯರ್ಥಿಯು ಕರ್ತವ್ಯಕ್ಕೆ ಸರ್ಕಾರಿ ಸೇವೆಗೆ ಸೇರಲು ಅರ್ಹರಾಗಿರುವ ಬಗ್ಗೆ ಜಿಲ್ಲಾ ಸರ್ಜನ್ ದರ್ಜೆಗೆ ಕಡಿಮೆಯಿಲ್ಲದ ವೈದ್ಯಾಧಿಕಾರಿಗಳಿಂದ ದೈಹಿಕ ಸಾಮರ್ಥ್ಯದ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು.

8) ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 59 ಸೇವನೆ 2012 ದಿನಾಂಕ 06-08-2012 ರ ಮೇರೆ ಸರ್ಕಾರ ನಿಗಧಿಪಡಿಸಬಹುದಾದ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಅಥವಾ ಇನ್ನಾವುದೇ ಪರೀಕ್ಷೆಗಳನ್ನು ಅವರ ಪರೀಕ್ಷಾರ್ಥ ಅವಧಿಯಲ್ಲಿ ನಿಯಮಾನುಸಾರ ಉತ್ತೀರ್ಣರಾಗಿರತಕ್ಕದ್ದು.

9) ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು ಹಾಗೂ ಇಲಾಖಾಧಿಕಾರಿಗಳು ನೀಡಿರುವ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸತಕ್ಕದ್ದು. ಅಂತಹ ಅಭ್ಯರ್ಥಿಗಳು ಇಲಾಖೆಯಿಂದ ಬಿಡುಗಡೆಯಾಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಹಾಜರುಪಡಿಸತಕ್ಕದ್ದು.

10) ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಭಾರತ ಸಂವಿಧಾನದ ರೀತ್ಯಾ ನಿಷ್ಠೆಯ ಪ್ರಮಾಣ ವಚನ ಸ್ವೀಕರಿಸತಕ್ಕದ್ದು.

11) ಅಭ್ಯರ್ಥಿಯು ಕರ್ತವ್ಯದ ಮೇಲೆ ಹಾಜರಾದ ನಂತರ ಪ್ರಥಮ ವೇತನ ಪಡೆಯಲು ಸರ್ಕಾರಿ ಆದೇಶ ಸಂಖ್ಯೆ ಜಿಎಡಿ (3) ಎಸ್ಆರ್ಎಸ್ 74 ದಿನಾಂಕ 02-08-1974 ರ ಅನ್ವಯ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು.

12) ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 216 ಬಿಎಸ್‌ಸಿ 2013 ದಿನಾಂಕಃ 22-08-2013 ರ ಮೇರೆ ಕಛೇರಿ ಮುಖ್ಯಸ್ಥರು ಅಭ್ಯರ್ಥಿಯು ನೇಮಕಾತಿ ವೇಳೆ ಸಲ್ಲಿಸಿರುವ ಮೂಲ ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ವ್ಯತಿರಿಕ್ತ ವರದಿ ಬಂದಲ್ಲಿ ಅಂತಹ ಅಭ್ಯರ್ಥಿಯ ನೇಮಕಾತಿ ರದ್ದುಪಡಿಸುವುದಲ್ಲದೇ ನಿಯಮಾನುಸಾರ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

13) ಅಭ್ಯರ್ಥಿಯು ತನ್ನ ವಾಸಸ್ಥಳ ಕ್ಷೇತ್ರಕ್ಕೆ ಸಂಬಂಧಿಸಿದ ಕನಿಷ್ಠ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಕರ್ತವ್ಯಕ್ಕೆ ಹಾಜರಾಗುವ ವೇಳೆಯಲ್ಲಿ ಹಾಜರುಪಡಿಸತಕ್ಕದ್ದು.

14) ಆಯ್ಕೆಯಾಗಿರುವ ಅಭ್ಯರ್ಥಿಯು ಅವರನ್ನು ನೇಮಿಸಿರುವ ಸ್ಥಳದಲ್ಲಿ ಕಡ್ಡಾಯವಾಗಿ ವಾಸ ಮಾಡಬೇಕು.

15) ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 54 ಬಿಎಸ್‌ಸಿ 2007 ದಿನಾಂಕಃ 27-3-2007 ರನ್ವಯ ಅಂತರ ಜಿಲ್ಲಾ ವರ್ಗಾವಣೆಗೆ ಕನಿಷ್ಠ ಐದು ವರ್ಷಗಳ ಸೇವೆಯನ್ನು ಮೈಸೂರು ಜಿಲ್ಲೆಯಲ್ಲಿ ಕಡ್ಡಾಯವಾಗಿ ಪೂರ್ಣಗೊಳಿಸಿದಲ್ಲಿ ಮಾತ್ರ ಅರ್ಹರಾಗಿರುತ್ತಾರೆ.

16) ಅಭ್ಯರ್ಥಿಯು ನೇರ ನೇಮಕಾತಿ ಮೇಲೆ ನೇಮಕಾತಿಗಾಗಿ ಯಾವುದೇ ತಪ್ಪು ಮಾಹಿತಿ ನೀಡಿದ್ದಲ್ಲಿ ಹಾಗೂ ಸರ್ಕಾರಿ ಆದೇಶಗಳ ವಿರುದ್ಧ ತಪ್ಪು ಮಾಹಿತಿ ನೀಡಿ ನೇಮಕಾತಿ ಹೊಂದಿ ಮುಂದೆ ಸಾಬೀತಾದಲ್ಲಿ ನೇಮಕಾತಿಯನ್ನು ಯಾವುದೇ ಷರತ್ತಿಲ್ಲದೆ ರದ್ದುಪಡಿಸಲಾಗುವುದು.

17) ಗ್ರಾಮಲೆಕ್ಕಿಗರನ್ನು ಕರ್ತವ್ಯಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ ನಿಗಧಿಪಡಿಸಿದ ಮೊಬಲಗಿನ ಕೆಜಿಐಡಿ ಮೊತ್ತವನ್ನು ಬ್ಯಾಂಕಿನಲ್ಲಿ ಅಭ್ಯರ್ಥಿಗಳು ಪಾವತಿಸಿದ ಚಲನ್‌ನ್ನು ತಹಸೀಲ್ದಾರ್‌ರವರಲ್ಲಿ ಹಾಜರುಪಡಿಸುವುದು. ತಹಶೀಲ್ದಾರ್‌ರವರು ತಕ್ಷಣ ಪ್ರಸ್ತಾವನೆಯನ್ನು ವಿಮಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

18) ನೇಮಕಾತಿಗೊಳಿಸಲಾದ ಸ್ಥಳ / ಕಛೇರಿಯನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲಾಗುವುದಿಲ್ಲ. ಸ್ಥಳ ಬದಲಾವಣೆ ಮಾಡುವಂತೆ ಒತ್ತಡ ತಂದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿ ಆದೇಶವನ್ನು ರದ್ದುಗೊಳಿಸಲಾಗುತ್ತದೆ.

19) ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ (ಎಸ್‌ಪಿಎಲ್) ಪಿಇಟಿ 2005 ದಿನಾಂಕ 31-03-2006 ರಂತೆ ದಿನಾಂಕ 01-04-2006 ರ ನಂತರ ಸರ್ಕಾರಿ ಸೇವೆಗೆ ನೇಮಕಗೊಂಡ ನೌಕರರ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಒಟ್ಟು ಮೊತ್ತದ ಶೇಕಡಾ 10% ರಷ್ಟು ಭಾಗವನ್ನು ಅವರ ಪ್ರತಿ ಮಾಹೆಯ ವೇತನದಲ್ಲಿ ನಿವೃತ್ತಿ ಸೌಲಭ್ಯದ ವಂತಿಗೆಯನ್ನು ಕಟಾಯಿಸುವುದು.

20) ಮೈಸೂರು ಜಿಲ್ಲಾ ಕಂದಾಯ ಘಟಕದ ಗ್ರಾಮಲೆಕ್ಕಿಗರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ರವರು, ಸದರಿ ಆದೇಶವನ್ನು ಮಾರ್ಪಡಿಸುವ ಹಾಗೂ ರದ್ದುಪಡಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ.

(ಅಭಿರಾಂ ಜಿ ಶಂಕರ್)

ಅಧ್ಯಕ್ಷರು,

ಆಯ್ಕೆ ಪ್ರಾಧಿಕಾರ ಹಾಗೂ ನೇಮಕಾತಿ ಪ್ರಾಧಿಕಾರ,

ಮತ್ತು ಜಿಲ್ಲಾಧಿಕಾರಿ

ಮೈಸೂರು ಜಿಲ್ಲೆ, ಮೈಸೂರು.

ಪ್ರತಿಯನ್ನು: ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ/ಕಳುಹಿಸಿದೆ.

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಸೇವೆಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
3) ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು
4) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
5) ರಾಷ್ಟ್ರೀಯ ಸೂಚನಾ ವಿಜ್ಞಾನ ಅಧಿಕಾರಿಗಳು, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಜಿಲ್ಲಾ ಪಂಚಾಯತ್, ಮೈಸೂರು ಇವರಿಗೆ ಸದರಿ ಆದೇಶದ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
6) ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಕಬಿನಿ ಜಲಾಶಯ ಯೋಜನೆ, ಮೈಸೂರು
7) ಉಪವಿಭಾಗಾಧಿಕಾರಿಗಳು, ಮೈಸೂರು / ಹುಣಸೂರು ಉಪ ವಿಭಾಗ.
8) ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಮೈಸೂರು ಇವರಿಗೆ ಕಳುಹಿಸುತ್ತಾ, ನೇಮಕಾತಿ ಹೊಂದಿದ ಅಭ್ಯರ್ಥಿಗಳಿಗೆ, ವೃತ್ತಿ ಬುನಾದಿ ತರಬೇತಿ ನೀಡಲು ಕ್ರಮವಹಿಸುವುದು
9) ತಹಶೀಲ್ದಾರ್, ಮೈಸೂರು : ನಂಜನಗೂಡು : ಟಿ.ನರಸೀಪುರ / ಹುಣಸೂರು / ಕೃಷ್ಣರಾಜನಗರ / ಹೆಗ್ಗಡದೇವನಕೋಟೆ / ಸರಗೂರು / ಪಿರಿಯಾಪಟ್ಟಣ ತಾಲ್ಲೂಕು
10) ಜಿಲ್ಲಾ ಉದ್ಯೋಗಾಧಿಕಾರಿಗಳು, ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಸರಸ್ವತಿಪುರಂ, ಮೈಸೂರು
11) ಸಂಬಂಧಪಟ್ಟ ಅಭ್ಯರ್ಥಿಗಳಿಗೆ ನೋಂದಣಿ ಅಂಚೆ ಮೂಲಕ ಕಳುಹಿಸಿದೆ.
12) ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ಶಾಖೆಗೆ : ಅಪರ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ಶಾಖೆಗೆ.
13) ಈ ಕಛೇರಿಯ ಇಎಸ್ ಟಿ (1) ಶಾಖೆಗೆ : ಎಸಿಟಿ (2) ಶಾಖೆಗೆ / ಚುನಾವಣಾ ಶಾಖೆಗೆ / ಎಸಿಟಿ (1) ಶಾಖೆಗೆ / ಎಡಿಎಂ ಶಾಖೆಗೆ
14) ಕಡತಕ್ಕೆ /ಹೆಚ್ಚುವರಿ ಪ್ರತಿಗಳು